ಆ) ಕಾರ್ಖಾನೆಯ ಸಂಚಾಲಕ ಮಂಡಳಿಯವರು ತೆಗೆದುಕೊಂಡ ಅಲೌನ್ಸ್ ಮತ್ತು ಪ್ರವಾಸ ಭತ್ಯ ಈ ಕೆಳಗಿನಂತೆ ಇರುತ್ತದೆ.

ವರ್ಷ	ಪ್ರವಾಸ ಭತ್ಯ ರೂ,	ಸಿಟಿಂಗ್ ಅಲೌನ್ಸ್ ರೂ.
೧೯೭೬–೭೪	೨೧,೨೦೮–೦೦	೩೦,೯೩೭–೦೦
೧೯೭೪–೭೯	೨೦,೦೨೦–೦೦	೪೧,೭೬೦–೦೦
೧೯೭೯–೮೦	೩೨,೪೪೯–೦೦	೩೭,೬೫೦–೦೦
೧೯೮೦–೮೧	೩೧,೩೫೯–೦೦	೪೯.೪೦೦–೦೦
೧೯೮೧–೮೨	೧೯,೭೮೧–೦೦	೬೬,೮೪೮–೦೦

ಈ) ಕಾರಖಾನೆಯ ಕೆಲಸವು ಕಾರ್ಖಾನೆಯ ಕಾರ್ಯಕ್ಷೇತ್ರವನ್ನು ಬಿಟ್ಟು ಹೊರಗಡೆ ಇದ್ದಾಗ ಮಾತ್ರ ಕಾರ್ಖಾನೆಯ ಕಾರು ಹಾಗೂ ಜೀಪುಗಳನ್ನು (ಕಾರ್ಖಾನೆಯ ಆಡಳಿತ ವರ್ಗ ಮತ್ತು ಸಿಬ್ಬಂದಿ ವರ್ಗದವರಿಂದ ಉಪಯೋಗಿಸಲ್ಪಟ್ಟಿದೆ (ಆಡಳಿತ ಮಂಡಳಿಯ ಒಪ್ಪಿಗೆಯ ಮೇರೆಗೆ).

೧೯೮೩ನೇ ಇಸವಿಯಲ್ಲಿ ವರ್ಗಾವಣೆ ಮಾಡಿದ ತಹಸೀಲ್ದಾರರುಗಳ ಸಂಖ್ಯೆ

೨೦ (೬೩) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

(ಅ) ೧೦–೧–೧೯೮೩ರಿಂದ ೨೦–೭–೧೯೮೩ರವರೆಗೆ ವರ್ಗಾವಣೆ ಮಾಡಿದ ತಹಸೀಲ್ದಾರರುಗಳ ಸಂಖ್ಯೆ ಎಷ್ಟು

(ಆ) ವೈಯಕ್ತಿಕ ಕೋರಿಕೆಗಳ ಮೇರೆಗೆ ವರ್ಗಾವಣೆ ಮಾಡಿದಂತಹ ಅಧಿಕಾರಿಗಳ ಸಂಖ್ಯೆ ಎಷ್ಟು

(ಇ) ಅಂತಹ ವರ್ಗಾವಣೆಗಳಲ್ಲಿ ಅಕಾಲಿಕ ವರ್ಗಾವಣೆಯು ವ್ಯಭಾವಕ್ಕೆ ಸೇರಿದವುಗಳ ಸಂಖ್ಯೆ ಎಷ್ಟು.

(ಈ) ಅಂತಹ ವರ್ಗಾವಣೆಯಿಂದುಂಟಾದ ವೆಚ್ಚವೆಷ್ಟು ?

ಶ್ರೀ ವಿ. ಎಸ್. ಪಾಟೀಲ್ (ಕಂದಾಯ ಮಂತ್ರಿಗಳು)—

(ಅ) ೯೮

(ಆ) ೩

(ಇ) ೬೨

(ಈ) ವರ್ಗಾವಣೆಯಾದ ಎಲ್ಲರೂ ಇನ್ನೂ ತಮ್ಮ ಭತ್ಯದ ಬಗ್ಗೆ ಬೇಡಿಕೆ ಸಲ್ಲಿಸಿಲ್ಲ. ಇದುವರೆಗೆ ಸಲ್ಲಿಸಿದ ಬೇಡಿಕೆಯ ಪ್ರಕಾರ ಖರ್ಚು ರೂ. ೩೯,೭೪೯–೭೦.

ರಾಜ್ಯದಲ್ಲಿ ತಕಾವಿ ಸಾಲವನ್ನು ಮನ್ನಾ ಮಾಡುವುದು.

೨೧ (೧೮) ಶ್ರೀ ಕೆ.ಹೆಚ್. ಕುರುಡಗಿಯವರ (ಮುಂಡರಗಿ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

(೧) ರಾಜ್ಯದಲ್ಲಿ ತಕಾವಿ ಸಾಲವನ್ನು ಮನ್ನಾ ಮಾಡಿದ್ದು ಯಾವ ವರ್ಷದಿಂದ ?

(೨) ಯಾವ ತರಹ ಮತ್ತು ಎಷ್ಟು ತಕಾವಿ ಸಾಲ ಜಿಲ್ಲಾವಾರು ವಜಾ ಮಾಡಲಾಗಿದೆ ?